ಸಾಕ್ಷಿಯು ಕ್ರಮವಾಗಿ ಪ್ರಮಾಣಿಕರಿಸಿದ ದಿನಾಂಕಃ 28-11-2019

ಪಾಟಿ ಸವಾಲು ಃ ಶ್ರೀ ಪಿ.ಕೆ.ಜಿ ವಕೀಲರಿಂದ

ನಾನು ಶನಿವಾರಸಂತೆಯ ಈ ದಾವೆಗೆ ಸಂಬಂಧಿಸಿದಂತೆ ಸಿಟಿ ಸರ್ವೆ ಮಾಡುವ ಸಮಯದಲ್ಲಿ ನಾನು ಸದರಿ ಸ್ಥಳದಲ್ಲಿರಲಿಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಸಾಕ್ಷ್ಯವನ್ನು ಸರ್ವೆ ಗೆ ಸಂಬಂಧಿಸಿ ದಾಖಲಾತಿಗಳನ್ನು ನೋಡಿ ಹೇಳಿರುತ್ತೇನೆ. ಆ ಸಮಯದಲ್ಲಿ ಎ.ಡಿ.ಎಲ್.ಆರ್ ರವರು ಇರಲಿಲ್ಲ , ತಹಶೀಲ್ದಾರ್ ರವರು ಸರ್ವೆ ಕಾರ್ಯ ಮಾಡುತ್ತಿದ್ದರು.

ನಿಪಿ 55 ಮತ್ತು ನಿಪಿ 56 ರಲ್ಲಿರುವ ಬರವಣಿಗೆ ಯಾರ ಹೆಸರನಲ್ಲಿದೆ ಎಂದು ನನಗೆ ಗೊತ್ತಿಲ್ಲ . ಆದರೆ ಅದರಲ್ಲಿ ಸರ್ವೆಯರ್ ಆಗಿ ಮಹದೇಗೌಡ ಮತ್ತು ನರಸಯ್ಯ ರವರು ಸಹಿಯನ್ನು ಮಾಡಿರುತ್ತಾರೆ. ಸಾಕ್ಷಿ ಮುಂದುವರೆದು ಆ ಸಮಯದಲ್ಲಿ ಡಿ.ಡಿ.ಎಲ್.ಆರ್ , ವಿಚಾರಣಾ ಅಧಿಕಾರಿಯಾಗಿ ದೇವರಾಜ್ ರವರು ಸದರಿ ದಾಖಲೆಗೆ ಸಹಿ ಮಾಡಿರುತ್ತಾರೆ.

ನಾವು ಪ್ರಾಪರ್ಟಿ ಕಾರ್ಡ್ ಅನ್ನು ಫಿಲ್ಡ್ ಪುಸ್ತಕ ಆಧರಿಸಿ ಕೊಡುತ್ತೇವೆ. ನಿಪಿ 56 ಎ ರಲ್ಲಿ ರುವ ದಾಖಲೆಗಳು ವಾದಿ ಮಂಜುನಾಥ್ ರವರಿಗೆ ಸಂಬಂಧಿಸಿದು ಎಂದರೆ ಸರಿ. ಸಾಮಾನ್ಯವಾಗಿ ಸ್ವಾದೀನಕ್ಕಿಂತ ಕಡಿಮೆ ಇದ್ದರೆ ರೆಕಾರ್ಡ್ ಮತ್ತು ಸ್ವಾದೀನ ದಾಖಲೆಗಳಲ್ಲಿ ಕಡಿಮೆ ಇದ್ದರೆ ಸದರಿ ಬಗ್ಗೆ ವಿಚಾರಣೆ ಕೈಗೊಂಡು ರೆಕಾರ್ಡ್ ನಲ್ಲಿ ಎಷ್ಟಿರುತ್ತೋ ಅಷ್ಟನ್ನು ಹಕ್ಕು ದಾಖಲೆಯಲ್ಲಿ ತೋರಿಸಲಾಗಿರುತ್ತದೆ. ಸಾಕ್ಷಿ ಮುಂದುವರೆದು ಹಕ್ಕು ದಾಖಲೆಯಲ್ಲಿರುವ ಕ್ಷೇತ್ರವನ್ನೇ ನಕ್ಷೆಯಲ್ಲಿ ತೋರಿಸುತ್ತೇವೆ.

1 ಸೆಂಟ್ ಎಂದರೆ 40.47 ಸ್ಕೇರ್ ಮೀ. ಆಗುತ್ತದೆ, ವಾದಿಯ ದಾಖಲೆ ಪ್ರಕಾರ ವಾದಿಗೆ ಸಂಬಂಧಿಸಿದ ಜಾಗ ಒಟ್ಟು 1,214.1 ಸ್ಕ್ವೆರ್ ಮೀ. ಅಂದರೆ 30 ಸೆಂಟ್. ನಿಪಿ 22 ರಲ್ಲಿ ಯಾವುದೇ ಒತ್ತುವರಿ ಇರುವ ಬಗ್ಗೆ ಮಾಹಿತಿ ಇರುವುದಿಲ್ಲ. ಹಾಗಾಗಿ ವಾದಿಯ ಜಾಗದಲ್ಲಿ ಎಷ್ಟು ಜಾಗವನ್ನು ಮತ್ತು ವಾದಿಯ ಜಾಗದ ಯಾವ ಜಾಗವನ್ನು ಒತ್ತುವರಿ ಮಾಡಿದ್ದಾರೆ ಎಂದು ಹೇಳಲಾಗುವುದಿಲ್ಲ.

ಸಾಕ್ಷಿ ಮುಂದುವರೆದು ಸದರಿ ಸಂಗತಿಯನ್ನು ಎಕ್ವೇರಿ ಆಫಿಸರ್ ಅಂದರೆ ಡಿ.ಡಿ.ಎಲ್.ಆರ್ ರವರಿಗೆ ತಿಳಿದಿದ್ದು ಅವರಿಗೆ ವಿಚಾರಣೆ ಮಾಡಿದರೆ ಗೊತ್ತಾಗುತ್ತದೆ.

ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ವಿಚಾರಣಾ ಅಧಿಕಾರಿಯ ಹೆಸರು ದೇವರಾಜ್ ಆಗಿರುತ್ತದೆ, ಅವರು ಪ್ರಸ್ತುತ ಚಿಕ್ಕಮಗಳೂರಿನಲ್ಲಿ ಡಿ.ಡಿ.ಎಲ್.ಆರ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಪ್ರತಿವಾದಿಗಳು ಒತ್ತುವರಿ ಮಾಡಲಾಗಿರುವ ಜಾಗ ಯಾವುದೆಂದು ನಿಪಿ 55 ನ್ನು ನೋಡಿ ಸಿ.ಟಿ.ಎಸ್ ನೋಡಿ ಹೇಳಬಹುದು ಆದರೆ ಅದನ್ನು ಹೇಳಬೇಕಾದರೆ ರೆವಿನ್ಯೂ ಮ್ಯಾಪ್ ಮೇಲೆ ಓವರ್ ಲಾಕ್ ಮಾಡಿ ಹೇಳಬೇಕಾಗುತ್ತದೆ.

1 ನೇ ಪ್ರತಿವಾದಿ ಬಳಿ ಇರುವ ಹೆಚ್ಚುವರಿ ಜಾಗ ಸಿ.ಟಿ.ಎಸ್ ನಂ. 351 ಕ್ಕೆ ಸಂಬಂಧಿಸಿದಾಗಿರುತ್ತದೆ. ಅದೇ ರೀತಿ 2 ನೇ ಪ್ರತಿವಾದಿ ಬಳಿ ಇರುವ ಹೆಚ್ಚುವರಿ ಜಾಗ ಸಿ.ಟಿ.ಎಸ್ ನಂ. 352 ಕ್ಕೆ ಸಂಬಂಧಿಸಿದಾಗಿರುತ್ತದೆ. ಅದೇ ರೀತಿ 3 ನೇ ಪ್ರತಿವಾದಿ ಬಳಿ ಇರುವ ಹೆಚ್ಚುವರಿ ಜಾಗ ಸಿ.ಟಿ.ಎಸ್ ನಂ. 353 ಕ್ಕೆ ಸಂಬಂಧಿಸಿದಾಗಿರುತ್ತದೆ. ಸದರಿ ಮಾಹಿತಿಗಳನ್ನು ನಿಪಿ 56 ನ್ನು ನೋಡಿ ಸಾಕ್ಷಿ ನುಡಿದಿರುತ್ತಾರೆ.

ನಿಪಿ 57 ರಿಂದ 60 ರಲ್ಲಿ ಸರ್ವೆ ಆದ ನಂತರ ವಿಚಾರಣ ಅಧಿಕಾರಿಗಳು ವಿಚಾರಣೆ ಮಾಡಿದ ನಂತರ ಪ್ರಾರ್ಪಟಿ ಕಾರ್ಡ್ ಅನ್ನು ಇಶ್ಯೂ ಮಾಡಿದ ಬಗ್ಗೆ ನಮೂದು ಇದೆ. ಆದರೆ ನಿಪಿ 59 ರಲ್ಲಿ ವಿಚಾರಣೆ ಮಾಡಿ ಆದೇಶ ಮಾಡಿರುವ ಬಗ್ಗೆ ನಮೂದು ಇಲ್ಲಾ, ಆದರೆ ನೋಟಿಸ್ ಕೊಟ್ಟ ಬಗ್ಗೆ ನಮೂದು ಇರುತ್ತದೆ. ನಿಪಿ 59 ಕ್ಕೆ ಸಂಬಂಧಿಸಿದಂತೆ ವಿಚಾರಣೆ ಅಧಿಕಾರಿ ಬೇರೆ ಆಗಿರುತ್ತಾರೆ. ಮತ್ತು ನಿಪಿ 57, 58, ಮತ್ತು 60 ಕ್ಕೆ ಸಂಬಂಧಿಸಿದ ವಿಚಾರಣಾ ಅಧಿಕಾರಿಗಳು ಬೇರೆಯವರಾಗಿರುತ್ತಾರೆ.

ನನಗೆ ವೈಯಕ್ತಿಕವಾಗಿ ಯಾವುದೇ ತಿಳುವಳಿಕೆ ಇಲ್ಲಾ , ನಾನು ಎಲ್ಲಾ ಸಾಕ್ಷ್ಯ ವನ್ನು ನಾನು ಹಾಜರುಪಡಿಸಿದ ನಿಪಿ 57 ರಿಂದ 60 ರ ದಾಖಲೆಯನ್ನು ನೋಡಿ ನುಡಿದಿರುತ್ತೇನೆ. ಸಿಟಿ ಸರ್ವೆ ಮಾಡಿದಾಗ ಸಾಮಾನ್ಯವಾಗಿ ಒಬ್ಬ ವ್ಯಕ್ತಿಯ ಬಳಿ ಹೆಚ್ಚುವರಿ ಜಾಗ ಇದ್ದಾಗ ಅದು ಯಾರಿಗೆ ಸೇರಿದ್ದು , ಮತ್ತು ಸದರಿ ಜಾಗದ ಸರ್ವೆ ನಂ. ಎಷ್ಟೆಂದು ಸಿಟಿ ಸರ್ವೆಯಲ್ಲಿ ನಮೂದು ಮಾಡಬೇಕು ಎಂದರೆ ಸರಿ , ಹೆಚ್ಚುವರಿ ವಿಸ್ತೀರ್ಣವನ್ನು ಮಾಲ ಮಾಲೀಕರ ಸಿಟಿ ಸರ್ವೆ ನಂ. ಗೆ ಸೇರಿಸಿ ಬರೆಯಬೇಕಾಗುತ್ತದೆ.

ವಾದಿ ಯ ಸಿ.ಟಿ.ಎಸ್ ನಂ. ಅಂದರೆ ಸಿಟಿ ಸರ್ವೆ ನಂ. 350 ಆಗಿರುತ್ತದೆ. ನಿಪಿ 56 ರಲ್ಲಿ ತೋರಿಸಿರುವ ನಕ್ಷೆಯಲ್ಲಿ ಹೆಚ್ಚುವರಿಯಾಗಿ ತೋರಿಸಲಾಗಿರುವ ಜಾಗವೂ ವಾದಿಯ ದೆಂದೆ ಹೇಳಲಾಗುವುದಿಲ್ಲ. ಆದರೆ ಅದು ಹೆಚ್ಚುವರಿ ಜಾಗ ಪ್ರತಿವಾದಿಯ ಬಳಿ ಸ್ವಾದೀನ ಇರುವುದನ್ನು ತೋರಿಸುತ್ತದೆ.

1 ನೇ ಪ್ರತಿವಾದಿಗೆ ಸೇರಿದ ನಿಪಿ 56 ಬಿ ಮತ್ತು ಸಿ , 2 ನೇ ಪ್ರತಿವಾದಿಗೆ ಸೇರಿದ ನಿಪಿ 56 ಡಿ ರಿಂದ ಜಿ , ಮತ್ತು 3 ನೇ ಪ್ರತಿವಾದಿಗೆ ಸೇರಿದ ನಿಪಿ 56 ಐ ಸದರಿ ದಾಖಲೆಯಲ್ಲಿ ವಾದಿಗೆ ಸೇರಿದ ಸಿಟಿಎಸ್ 350 ರ ಹೆಚ್ಚುವರಿ ವಿಸ್ತಿರ್ಣ ವಾದಿಗೆ ಸೇರಿದ್ದು ಎಂದು ನಮೂದು ಮಾಡಿಲ್ಲ ಎಂದರೆ ಸರಿ.

ನಿಪಿ 55 ರಲ್ಲಿ ವಾದಿ ಮತ್ತು ಪ್ರತಿವಾದಿಯರ ಅವರು ಹೊಂದಿರುವ ಒಟ್ಟು ವಿಸ್ತಿರ್ಣ ನಮೂದು ಮಾಡಿದ್ದು , ಆದರೆ ಹಕ್ಕು ದಾಖಲೆಗಳ ಪ್ರಕಾರ ಅವರು ಎಷ್ಟು ಸ್ವಾದೀನದಲ್ಲಿ ಇರಬೇಕಾಗಿತ್ತು ಎಂದು ನಮೂದು ಮಾಡಿಲ್ಲ ಎಂದರೆ ಸರಿ.

ಪಾಟಿ ಸವಾಲು ಮುಕ್ತಾಯವಾಯಿತು.

ಮರು ವಿಚಾರಣೆ ಇಲ್ಲಾ .

(ನನ್ನ ಉಕ್ತಲೇಕನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)

ಓದಿ ಹೇ ಕೇ ಸರಿ ಇದೆ

ಪ್ರ ದ ನ್ಯಾ ದಂ., ಸೋಮವಾರಪೇಟೆ.